**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ (ವಿಧಾನ ಸಭೆಯಿಂದ ಚುನಾಯಿತರು) ಇವರು ನಿಯಮ 72 ರಡಿ ಗಮನ ಸೆಳೆದಿರುವ ಸೂಚನೆಗೆ ಉತ್ತರ:**

**ವಿಷಯ:** ಕರ್ನಾಟಕ ರಾಜ್ಯದ ಕೃಷಿ ಆರ್ಥಿಕತೆಯಲ್ಲಿ ಭತ್ತವು ಒಂದು ಪ್ರಮುಖ ಆಹಾರ ಧಾನ್ಯವಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಪ್ರಮುಖವಾಗಿ ಉತ್ತರ ಕರ್ನಾಟಕ ಭಾಗದ ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಯ ಲಕ್ಷಾಂತರ ಕುಟುಂಬಗಳು ಭತ್ತದ ಕೃಷಿಯ ಮೇಲೆ ನೇರವಾಗಿ ಅವಲಂಬಿತವಾಗಿವೆ. ಈ ಬೆಳೆಯ ಸಂಶೋಧನೆ, ಮಾರುಕಟ್ಟೆ ವ್ಯವಸ್ಥೆ, ಬೆಲೆ ಸ್ಥಿರತೆ ಮತ್ತು ರೈತರ ಹಿತಾಸಕ್ತಿಯ ರಕ್ಷಣೆಗಾಗಿ 'ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ' ಹಾಗೂ 'ಕಾಫಿ ಅಭಿವೃದ್ಧಿ ಮಂಡಳಿ'ಯ ರೀತ್ಯಾ ಭತ್ತದ ಬೆಳೆಗೆ ಪ್ರತ್ಯೇಕವಾಗಿ 'ಕರ್ನಾಟಕ ಭತ್ತ ಅಭಿವೃದ್ಧಿ ಮಂಡಳಿ'ಯನ್ನು ಸ್ಥಾಪಿಸುವ ಕುರಿತು ಮಾನ್ಯ ಕೃಷಿ ಸಚಿವರ ಗಮನ ಸೆಳೆದಿರುವ ಬಗ್ಗೆ.

**ಉತ್ತರ:** ರಾಜ್ಯದಲ್ಲಿ 2024-25ನೇ ಸಾಲಿನಲ್ಲಿ 39.49 ಲಕ್ಷ ಟನ್ ಅಕ್ಕಿಯನ್ನು ಉತ್ಪಾದಿಸಲಾಗಿರುತ್ತದೆ ಹಾಗೂ 2025-26ನೇ ಸಾಲಿನಲ್ಲಿ ಮೊದಲನೇ ಅಂದಾಜಿನ ಪ್ರಕಾರ ಅಕ್ಕಿ ಉತ್ಪಾದನೆಯು 30.58 ಲಕ್ಷ ಟನ್ ಗಳಷ್ಟಿರುತ್ತದೆ. ರಾಜ್ಯದಲ್ಲಿ 2024-25ನೇ ಸಾಲಿನಲ್ಲಿ ಸರಾಸರಿ ಇಳುವರಿ ಪ್ರಮಾಣ ಪ್ರತಿ ಹೆಕ್ಟೇರ್‌ಗೆ 3344 ಕೆ.ಜಿ. ಗಳಷ್ಟಿದೆ. ರಾಜ್ಯದಲ್ಲಿ ಭತ್ತ ಬೆಳೆಯುವ ಪ್ರಮುಖ ಜಿಲ್ಲೆಗಳೆಂದರೆ, ರಾಯಚೂರು, ಬಳ್ಳಾರಿ, ಕೊಪ್ಪಳ, ದಾವಣಗೆರೆ, ಯಾದಗಿರಿ, ಮೈಸೂರು, ಮಂಡ್ಯ ಜಿಲ್ಲೆಗಳಾಗಿವೆ.

ರಾಜ್ಯದಲ್ಲಿ ಕೃಷಿ ವಿಶ್ವ ವಿದ್ಯಾನಿಲಯಗಳು ಮತ್ತು ಅನೇಕ ಕೃಷಿ ಸಂಶೋಧನಾ ಕೇಂದ್ರಗಳು ಭತ್ತದ ತಾಂತ್ರಿಕತೆಗಳ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿರುತ್ತವೆ. ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ಕೃಷಿ ವಿಶ್ವವಿದ್ಯಾಲಯಗಳು ಉತ್ತಮ ಗುಣಮಟ್ಟದ ಭತ್ತದ ಬೀಜವನ್ನು ಉತ್ಪಾದಿಸಿ ರೈತರಿಗೆ ವಿತರಿಸುತ್ತಿವೆ.

ರಾಜ್ಯದಲ್ಲಿ ಭತ್ತವನ್ನು ಸಾರ್ವಜನಿಕ ವಿತರಣೆ ಮತ್ತು ಇತರೆ ಯೋಜನೆಗಳಡಿ ಬಳಸಿಕೊಳ್ಳಲು ಸಾಕಷ್ಟು ಪ್ರಮಾಣದಲ್ಲಿ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ಅವಕಾಶವಿರುತ್ತದೆ. ಅಲ್ಲದೆ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (KAPPEC) ಮತ್ತು Agricultural and Processed Food Products Export Development Authority (APEDA) ಸಂಸ್ಥೆಗಳು ಕೃಷಿ ಉತ್ಪನ್ನಗಳ ರಫ್ತು ಉತ್ತೇಜಿಸುವ ನಿಟ್ಟಿನಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿವೆ.

ಈ ಕಾರಣಗಳಿಂದಾಗಿ ರಾಜ್ಯದಲ್ಲಿ ಪ್ರತ್ಯೇಕವಾದ 'ಭತ್ತ ಅಭಿವೃದ್ಧಿ ಮಂಡಳಿ' ಯನ್ನು ಸ್ಥಾಪಿಸುವ ಉದ್ದೇಶವನ್ನು ಸರ್ಕಾರ ಹೊಂದಿರುವುದಿಲ್ಲ.

*ಕೃ ಇ 254 ಎಎಂಎಸ್ 2025*

**(ಎನ್.ಚಲುವರಾಯಸ್ವಾಮಿ)**
ಕೃಷಿ ಸಚಿವರು